ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 5- 9
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಭೋವಿ ಸಮುದಾಯದ ಪಾರಂಪರಿಕ ವೃತ್ತಿಯ ಮೇಲೆ ಕೈಗಾರೀಕರಣದಿಂದ ಉಂಟಾದ ಆರ್ಥಿಕ ಪರಿಣಾಮಗಳು

**ದೇವೇಂದ್ರಪ್ಪ ಎಚ್***
*ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಭೋವಿ ಸಮುದಾಯವು ಕರ್ನಾಟಕದ ಪರಿಶಿಷ್ಟಜಾತಿ ಸಮುದಾಯಗಳಲ್ಲಿ ಒಂದಾಗಿದೆ. ಶ್ರಮಿಕರಾದ ಈ ಸಮುದಾಯದವರು ಬಡತನ, ಅನಕ್ಷರತೆ, ಹಸಿವು, ಅನಾರೋಗ್ಯ ಮುಂತಾದ ಸಮಸ್ಯೆಗಳಿಂದ ಬಳಲುತಿದ್ದಾರೆ. ಹಿಂದೆ ಇವರು ಜೀವನ ನಿರ್ವಹಣೆಗಾಗಿ ಮೂಲ ವೃತ್ತಿಯನ್ನು ಮಾಡುತ್ತಿದ್ದರು, ಆದರೆ ವಿವಿಧ ಕಾರಣಗಳಿಂದ ಮೂಲ ವೃತ್ತಿಗೆ ಪೆಟ್ಟು ಬಿದ್ದಿರುವುದ್ದರಿಂದ ಈ ಸಮುದಾಯದವರ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಭೋವಿ ಸಮುದಾಯದ ಆರ್ಥಿಕತೆಯ ಮೇಲೆ ಕೈಗಾರೀಕರಣ ಬೀರಿದ ಪರಿಣಾವೇನು ಎಂಬುದನ್ನು ಚರ್ಚಿಸಲಾಗಿದೆ.*

***Keywords:*** *ಭೋವಿ, ಪರಿಶಿಷ್ಟ ಜಾತಿ, ಕೈಗಾರೀಕರಣ, ಆರ್ಥಿಕತೆ.*

## ಪೀಠಿಕೆ

ಭೋವಿ ಸಮುದಾಯದವರನ್ನು ವಡ್ಡರು ಎಂದು ಕರೆಯಲಾಗುತ್ತದೆ. ವಡ್ಡರಲ್ಲಿ ಕಲ್ಲುವಡ್ಡರು, ಮಣ್ಣುವಡ್ಡರು, ಗಿರಣಿವಡ್ಡರು, ಬಂಡಿವಡ್ಡರು, ತುಡುಗುವಡ್ಡರು ಎಂಬ ಒಳಪಂಗಡಗಳಿದ್ದು, ವೃತ್ತಿಗನುಗುಣವಾಗಿ ಈ ಹೆಸರುಗಳು ಬಂದಿರಬಹುದು. ಭೋವಿ ಸಮುದಾಯದ ಸಾಂಪ್ರದಾಯಿಕ ವೃತ್ತಿಯ ಮೇಲೆ ಕೈಗಾರೀಕರಣವು ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ. ಕಷ್ಟ ಜೀವಿಗಳಾದ ಈ ಸಮುದಾಯವರು ಅತ್ಯಂತ ಕಠಿಣ ವೃತ್ತಿಯನ್ನು ಮಾಡುತ್ತಿದ್ದು, ಬಡತನದಿಂದ ಜೀವನ ಸಾಗಿಸುತ್ತಿದ್ದಾರೆ. ಇವರು ಕಲ್ಲು ಹೊಡೆಯುವ, ಕೆರೆ-ಕಟ್ಟೆಗಳ ನಿರ್ಮಾಣ, ಸೇತುವೆಗಳ ನಿರ್ಮಾಣ, ಗೃಹ ಉಪಯೋಗಿ ವಸ್ತುಗಳ ತಯಾರಿಕೆ ಮುಂತಾದ ಮೂಲ ವೃತ್ತಿಯನ್ನು ಅವಲಂಬಿಸಿದ್ದರು. ಆದರೆ ಆಧುನಿಕ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಇವರ ಮೂಲ ವೃತ್ತಿಗೆ ಬೇಡಿಕೆ ಇಲ್ಲದೆ ಬಹುತೇಕ ನಶಿಸಿ ಹೋಗಿದೆ. ಇದರಿಂದಾಗಿ ಇವರ ಜೀವನ ನಿರ್ವಹಣೆ ತುಂಬ ಕಷ್ಟಕರವಾಗಿದೆ. ನಿರುದ್ಯೋಗ ಪ್ರಮಾಣ ಹೆಚ್ಚಿ ತುತ್ತಿನ ಚೀಲ ತುಂಬಿಸಿಕೊಳ್ಳಲು ಅಲೆಮಾರಿ, ಅರೆ ಅಲೆಮಾರಿಗಳಂತೆ ಕೆಲಸ ಅರಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುತ್ತಾ ತಮ್ಮ ಮಕ್ಕಳನ್ನು ಶೈಕ್ಷಣಿಕವಾಗಿ ವಂಚಿಸುತ್ತಿದ್ದಾರೆ. ಈ ಸಮುದಾಯದವರು ಮೂಲತಃ ಒರಿಸ್ಸಾದವರಾಗಿದ್ದು ವೃತ್ತಿಯನ್ನು ಅರಸಿ ಆಂಧ್ರದ ಮೂಲಕ ಕರ್ನಾಟಕಕ್ಕೆ ಬಂದಿದ್ದಾರೆ. ಇವರು ದೈಹಿಕವಾಗಿ ಗಟ್ಟಿಮುಟ್ಟಾಗಿದ್ದುದ್ದರಿಂದ ಕಷ್ಟಕರವಾದ ಎಲ್ಲಾ ಕೆಲಸಗಳಿಗೆ ಎಲ್ಲಾ ಸಮುದಾಯಗಳು ಬಳಸಿಕೊಳ್ಳುತ್ತಿದ್ದರು.

***Please cite this article as:*** ದೇವೇಂದ್ರಪ್ಪ ಎಚ್. (2022). ಭೋವಿ ಸಮುದಾಯದ ಪಾರಂಪರಿಕ ವೃತ್ತಿಯ ಮೇಲೆ ಕೈಗಾರೀಕರಣದಿಂದ ಉಂಟಾದ ಆರ್ಥಿಕ ಪರಿಣಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(4), 5–9.

**ಅಧ್ಯಯನದ ಉದ್ದೇಶಗಳು**

- ಕೈಗಾರಿಕೆಗಳಿಂದ ಭೋವಿ ಸಮುದಾಯದ ಪಾರಂಪರಿಕ ವೃತ್ತಿಯ ಮೇಲಾದ ಪರಿಣಾಮ ಅರಿಯುವುದು.
- ಪಾರಂಪರಿಕ ಸರಕುಗಳಿಗೆ ಬೆಲೆ ಮತ್ತು ಬೇಡಿಕೆ ತಿಳಿಯುವುದು.
- ಸಮುದಾಯದ ಅಭಿವೃದ್ಧಿಗೆ ಸರ್ಕಾರ ನೀಡಿರುವ ಸವಲತ್ತುಗಳನ್ನು ಪರಿಶೀಲಿಸುವುದು.

**ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ**

ಪ್ರಸ್ತುತ ಅಧ್ಯಯನಕ್ಕೆ ಸಂಡೂರು, ಸಿರುಗುಪ್ಪ, ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕಿನ ಭೋವಿ ಸಮುದಾಯದವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರತಿ ತಾಲೂಕಿನಿಂದ 20 ಜನರಂತೆ ಒಟ್ಟು 80 ಜನರನ್ನು ಸರಳ ಯಾದೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಣೆಗೆ ಸಂದರ್ಶನ ಕೈಪಿಡಿ, ಅವಲೋಕನ, ಗುಂಪು ಚರ್ಚೆ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಅನುಷಂಗಿಕ ಮಾಹಿತಿಯನ್ನು ವಿವಿಧ ಗ್ರಂಥಗಳು, ಲೇಖನಗಳು, ಅಪ್ರಕಟಿತ ಪ್ರೌಢ ಪ್ರಬಂಧಗಳು, ವರದಿಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ.

**ಗೃಹಬಳಕೆಯ ವಸ್ತುಗಳ ಮೇಲಾದ ಕೈಗಾರಿಕೆಗಳ ಪರಿಣಾಮ**

ಮಾನವನ ಆರ್ಥಿಕ ಚಟುವಟಿಕೆಗಳ ಬಗ್ಗೆ ಅರ್ಥಶಾಸ್ತ್ರದಲ್ಲಿ ಅಧ್ಯಯನ ಮಾಡಲಾಗುತ್ತದೆ. 1776ರಲ್ಲಿ ಆ್ಯಡಂಸ್ಮಿತ್‌ರವರ **'ವೆಲ್ತ್ ಆಫ್ ನೇಷನ್ಸ್'** ಗ್ರಂಥ ಪ್ರಕಟವಾದ ಮೇಲೆ ಅರ್ಥಶಾಸ್ತ್ರದ ಬೆಳವಣಿಗೆ ಪ್ರಾರಂಭವಾಯಿತು. ಇಂದು ಅರ್ಥಶಾಸ್ತ್ರವು ವಿವಿಧ ವಲಯಗಳಾಗಿ ಬೆಳವಣಿಗೆಯಾಗಿದೆ. ಮಾನವನು ಆದಿಕಾಲದಿಂದಲೂ ತನ್ನ ಆಹಾರ ಸಿದ್ಧಪಡಿಸಿಕೊಳ್ಳಲು ಪ್ರಕೃತಿಯ ಸಂಪನ್ಮೂಲಗಳಾದ ಕಲ್ಲು ಮತ್ತು ಬಂಡೆಯ ವಸ್ತುಗಳ ಸಹಾಯದಿಂದ ಸಿದ್ಧಪಡಿಸಿಕೊಳ್ಳುತ್ತಿದ್ದನು. ವರಳುಕಲ್ಲು, ಬೀಸುವಕಲ್ಲು, ರುಬ್ಬುಗುಂಡು ಇಂತಹ ವಸ್ತುಗಳನ್ನು ತಯಾರಿಸುವ ವಡ್ಡರ ಸಮುದಾಯವು ಇಡಿ ಸಮಾಜದ ಹಲವಾರು ಸಮುದಾಯಗಳಿಗೆ ಕೈಗಾರಿಕೆಗಳು ಇಲ್ಲದ ಕಾಲದಲ್ಲಿ ಅನುಕೂಲವಾಗಿದ್ದು, ಸೃಜನಶೀಲತೆಯಿಂದ ವಸ್ತುಗಳನ್ನು ತಯಾರಿಸುತ್ತಿದ್ದರು. ಅದರ ಮೂಲಕ ಭ್ರಾತೃ–ಭಾವನೆಯಿಂದ ಜೀವನ ನಡೆಯುತಿತ್ತು. ಆಧುನಿಕತೆ ಬೆಳವಣಿಗೆಯಿಂದ ಕೈಗಾರಿಕೆಗಳು ಸ್ಥಾಪನೆಯಾಗಿ ಗ್ರಾಮೀಣ ಗೃಹ ಕೈಗಾರಿಕೆಗಳು ಕಣ್ಮರೆಯಾಗಿ ಈ ವಸ್ತುಗಳನ್ನು ತಯಾರಿಸುವ ಭೋವಿ ಸಮುದಾಯ ಮತ್ತು ಇತರೆ ಸಮುದಾಯಗಳ ಸೃಜನಶೀಲ ಜ್ಞಾನ ನಶಿಸಿ ಯಂತ್ರೋಪಕರಣಗಳ ಅವಲಂಬನೆಯಿಂದ ಕೈಕೆಲಸ ಮಾಡುವ ಸಮುದಾಯಗಳು ಪೈಪೋಟಿ ಮಾಡಲಾರದೆ ನಿರುದ್ಯೋಗ, ಆರ್ಥಿಕ ಕೊರತೆಯ ಪರಿಣಾಮವಾಗಿ ಬಡತನದಿಂದ ಜೀವನ ನಡೆಸಲಾರದೆ ಅಲೆಮಾರಿ ಜೀವನ ನಡೆಸುವಂತಾಗಿದೆ.

**ಗ್ರೈಂಡರ್–ಮಿಕ್ಸಿಗಳ ಪ್ರಭಾವ**

ಮಾನವನು ಆಹಾರವನ್ನು ಅತಿಬೇಗ ತಯಾರಿಸಿಕೊಳ್ಳುವ ಬರದಲ್ಲಿ ಪಾರಂಪರಿಕ ಸರಕುಗಳಾದ ವರಳುಕಲ್ಲು, ಬೀಸುವಕಲ್ಲು, ರುಬ್ಬಗುಂಡುಗಳಿಂದ ತಯಾರಿಸುವುದನ್ನು ಬಿಟ್ಟು ಆಧುನಿಕ ವಸ್ತುಗಳಾದ ಗ್ರೈಂಡರ್, ಮಿಕ್ಸಿಗಳನ್ನು ಬಳಸಲಾರಂಭಿಸಿದನು. ಇದರಿಂದ ಭೋವಿ ಸಮುದಾಯ ತಯಾರಿಸುವ ಗೃಹೋಪಯೋಗಿ ಸರಕುಗಳಿಗೆ ಬೇಡಿಕೆ ಮತ್ತು ಬೆಲೆ ಇಲ್ಲದಾಗಿದೆ. ಆಧುನಿಕ ಸರಕುಗಳಿಗೆ ಪಾರಂಪರಿಕ ಸರಕುಗಳು ಪೈಪೋಟಿ ನೀಡಲಾಗದೆ ಮೂಲೆಗುಂಪಾಗಿದೆ. ಇದರಿಂದ ಈ ವೃತ್ತಿಯ ಜನರು

ನಿರುದ್ಯೋಗಿಗಳಾಗಿ ಆರ್ಥಿಕವಾಗಿ ಬಡವರಾಗಿ ಗಗನಕ್ಕೇರಿದ ದಿನನಿತ್ಯದ ಸರಕುಗಳನ್ನು ಕೊಳ್ಳಲು ಪಾರಂಪರಿಕ ವೃತ್ತಿಯಿಂದ ಸಾದ್ಯವಿಲ್ಲ. ಇದನ್ನು ಅರಿತುಕೊಂಡ ಈ ಸಮುದಾಯ ಬೇರೆ ಬೇರೆ ವೃತ್ತಿ ಬಯಸಿ ನಗರಗಳಿಗೆ ಮತ್ತು ಊರುಗಳಿಗೆ ಅಲೆಮಾರಿ, ಅರೆ ಅಲೆಮಾರಿಗಳಾಗಿ ವಲಸೆ ಹೋಗುವುದು ಕಂಡುಬಂದಿದೆ. ವಲಸೆಯಿಂದ ತಮ್ಮ ಮಕ್ಕಳಿಗಳಿಗೆ ಶಿಕ್ಷಣ ಕೊಡಿಸಲಾಗದೆ ಈ ಸಮುದಾಯದಲ್ಲಿ ಹೆಚ್ಚಾಗಿ ಅನಕ್ಷರತೆ ಹೆಚ್ಚು ಕಂಡುಬಂದಿದೆ. ಕೈಗಾರೀಕರಣವು ಅಭಿವೃದ್ಧಿಯ ಹಾದಿಯಲ್ಲಿ ಮಾನವನ ಬಯಕೆಗಳನ್ನು ಶೀಘ್ರದಲ್ಲಿ ಈಡೇರಿಸುವಂತಿದ್ದರೆ ಮತ್ತೊಂದು ಕಡೆ ಪಾರಂಪರಿಕ ವೃತ್ತಿಮಾಡುವ ವಡ್ಡರ ಸಮುದಾಯಕ್ಕೆ ಕಂಟಕವಾಗಿ ಪರಿಣಮಿಸಿದೆ.

ಆಹಾರ ಸಿದ್ಧತೆಗಾಗಿ ಮಾನವನು ಸ್ವಾವಲಂಬಿಯಾಗಿರುವುದರಿಂದ ದೂರವಾಗಿ ಯಂತ್ರಗಳ ಕೈಗೊಂಬೆಯಾಗಿದ್ದಾನೆ. ಹಿಂದೆ ಮಾನವನು ಯಾವುದೇ ಆಹಾರ ಸಿದ್ಧಪಡಿಸಿಕೊಳ್ಳಲು ಆರ್ಥಿಕ ವೆಚ್ಚವಿಲ್ಲದೇ ತನ್ನ ಸಮಯದಿಂದ ಯಾವುದರ ಅವಲಂಬನೆಯಿಲ್ಲದೆ ಆಹಾರ ಸಿದ್ಧಪಡಿಸಿಕೊಳ್ಳುತ್ತಿದ್ದರು. ಇಂದು ಆರ್ಥಿಕ ವೆಚ್ಚದಿಂದ ಆಹಾರ ಸಿದ್ಧಪಡಿಸಿಕೊಳ್ಳುತ್ತಾನೆ. ಪಾರಂಪರಿಕ ಸರಕುಗಳಿಂದ ತಯಾರಿಸಿದ ಆಹಾರವು ಅತ್ಯಂತ ರುಚಿಯನ್ನು ಆರೋಗ್ಯಕ್ಕೆ ಹಾನಿಕಾರ ಮಾಡದೆ ಉಪಯುಕ್ತ ಹೊಂದಿತ್ತು. ಆದರೆ ಇಂದು ಯಂತ್ರಗಳಾದ ಗ್ರೈಂಡರ್, ಮಿಕ್ಸಿಗಳಿಂದ ತಯಾರಿಸಿದ ಆಹಾರ ಪದ್ಧತಿ, ಪಾರಂಪರಿಕ ಆಹಾರ ತಯಾರಿಸಿದ ಸರಕುಗಳಿಗೆ ಹೋಲಿಸಿದರೆ ಅಷ್ಟೇನೂ ರುಚಿ ಇರುವುದಿಲ್ಲ. ರುಬ್ಬುಗುಂಡಿನಿಂದ, ಒರಳುಕಲ್ಲಿನಿಂದ ತಯಾರಿಸಿದ ಆಹಾರ ರಸವಡೆದು ತನ್ನ ಪೌಷ್ಟಿಕತೆ ಕಳೆದುಕೊಳ್ಳುತ್ತಿರಲಿಲ್ಲ. ಮಿಕ್ಸಿಯಿಂದ ತಯಾರಿಸಿದ ಆಹಾರ ರುಚಿ ಮತ್ತು ಪೌಷ್ಟಿಕತೆ ಕಡಿಮೆಯಾಗಿ ಮಾನವನ ಆರೋಗ್ಯದ ಮೇಲೆ ಪ್ರಭಾವ ಬೀರಿದೆ.

**ಕೋಷ್ಟಕ 1: ತಿಂಗಳಿಗೆ ಮಾರಾಟವಾದ ಸಾಂಪ್ರದಾಯಿಕ ಉಪಕರಣಗಳು**

| ಕ್ರ.ಸಂ. | ವಸ್ತುಗಳು | ಮಾರಿದ ಬೆಲೆ ಒಂದಕ್ಕೆ | ಮಾರಿದ ವಸ್ತುಗಳ ಸಂಖ್ಯೆ | ತಿಂಗಳಲ್ಲಿ ಮಾರಾಟ | ವೆಚ್ಚ | ಉಳಿತಾಯ |
|---|---|---|---|---|---|---|
| 1 | ಒರಳು ಕಲ್ಲುಗಳು | 1500 | 2 | 3000 | 800 | 2200 |
| 2 | ಬೀಸುವ ಕಲ್ಲು | 1500 | 2 | 3000 | 800 | 2200 |
| 3 | ರುಬ್ಬುಬ ಗುಂಡು | 100 | 2 | 2000 | 200 | 1800 |
| ಒಟ್ಟು | | | 6 | 8000 | 1800 | 6200 |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 1ರಲ್ಲಿ ತಿಂಗಳಿಗೆ ಮಾರಾಟವಾದ ಸಾಂಪ್ರದಾಯಿಕ ಉಪಕರಣಗಳ ವಿವರವನ್ನು ನೀಡಲಾಗಿದೆ. ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಕೈಗಾರೀಕರಣದಿಂದಾಗಿ ಭೋವಿ ಸಮುದಾಯದವರು ಸಿದ್ಧಪಡಿಸಿದ ಸಾಂಪ್ರದಾಯಿಕ ಉಪಕರಣಗಳಿಗೆ ಬೆಲೆ ಇಲ್ಲದಂತಾಗಿದೆ. ಸಾಮಾನ್ಯವಾಗಿ ಈ ವಸ್ತುಗಳ ತಯಾರಿಕೆಗೆ ಹೆಚ್ಚು ಶ್ರಮ ಮತ್ತು ವೆಚ್ಚವಾಗುತ್ತದೆ. ಆದರೆ ತಮ್ಮ ಮೂಲ ಕಸುಬಿನ್ನೇ ನಂಬಿ ಜೀವನ ಮಾಡುವ ವಡ್ಡರ ಸಮುದಾಯಕ್ಕೆ ಯಂತ್ರೋಪಕರಣಗಳು ಪೈಪೋಟಿಯಿಂದ ಬೆಲೆ ಕಡಿಮೆಯಾಗಿ ನಷ್ಟ ಅನುಭವಿಸುವಂತಾಗಿದೆ. ಮೇಲಿನ ಕೋಷ್ಟಕವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ದಿನಕ್ಕೆ 206 ರೂಪಾಯಿ ಕೂಲಿ ಬೀಳುತ್ತದೆ, ಈ ಕೂಲಿಯಿಂದ ಕನಿಷ್ಟ ಜೀವನ ನಡೆಸಲು ಕೂಡ ಸಾಧ್ಯವಿಲ್ಲ. ಕನಿಷ್ಟ ದಿನಕ್ಕೆ 8 ರಿಂದ 12 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ.

ಕೆಲಸ ನಿರ್ವಹಿಸುವಾಗ ಸುತ್ತಿಗೆ, ಮೊಳೆಗಳು ಕೈತಪ್ಪಿ ಕೈ–ಕಾಲುಗಳಿಗೆ ಬೀಳುವುದು ಸಾಮಾನ್ಯ. ಇದರಿಂದಾಗಿ ಕೆಲವು ಅಂಗವಿಕಲರಾಗಿರುವುದು ಕೂಡ ಸಂಶೋಧನೆಯಲ್ಲಿ ಗುರುತಿಸಲಾಗಿದೆ.

ಹಗ್ಗವಾದ ಕಲ್ಲು, ಬಂಡೆಗಳ ಬೆಲೆ ಮತ್ತು ಬೇಡಿಕೆ ಆಧುನಿಕ ಕೈಗಾರಿಕೆಗಳ ಪ್ರಭಾವದಿಂದ ಪಾರಂಪರಿಕವಾಗಿ ಪ್ರಕೃತಿಯ ಸಂಪನ್ಮೂಲಗಳಿಂದ ತಯಾರಿಸಿದ ಗುಡ್ಡದ ಕಲ್ಲು ಮತ್ತು ನಿಲುವು ಬಂಡೆಗಳಗೆ ಇತ್ತೀಚೆಗೆ ಬೇಡಿಕೆ ಇಲ್ಲವಾಗಿದೆ, ಮಿಷನರಿಗಳಿಂದ ತಯಾರಿಸಿದ ಟೈಲ್ಸ್‌ಗಳನ್ನು ಜನರು ಮನೆಯ ನೆಲಹಾಸು ಹಾಗೂ ಗೋಡೆಗಳಿಗೆ ಬಳಸುವುದರಿಂದ ವಡ್ಡರು ತಯಾರಿಸಿದ ಗುಡ್ಡದ ನೆಲಹಾಸು ಬಂಡೆಗಳನ್ನು ಕೊಂಡುಕೊಳ್ಳದೆ ಬೇಡಿಕೆ ಕಡಿಮೆಯಾಗಿ ಈ ವೃತ್ತಿ ಮಾಡುವ ಜನರಿಗೆ ನಿರುದ್ಯೋಗ ಸೃಷ್ಠಿಮಾಡಿದೆ. ಸಿಮೆಂಟಿನ ಕಲ್ಲುಗಳು ಮತ್ತು ಕೆಂಪು ಇಟ್ಟಿಗೆಯ ಫ್ಯಾಕ್ಟರಿಯಿಂದ ತಯಾರಿಸಿದ ಸರಕುಗಳಿಂದ ಮನೆಗಳನ್ನು, ಕಟ್ಟಡಗಳನ್ನು ಹೆಚ್ಚಾಗಿ ಕಟ್ಟುತ್ತಿರುವುದರಿಂದ ಗುಡ್ಡದ ಕಲ್ಲಿಗೆ ಬೇಡಿಕೆ ಇಲ್ಲದಾಗಿ ಕಿಮ್ಮತ್ತಿಗೆ ಬೆಲೆ ಇಲ್ಲದಾಗಿದೆ. ಹಾಗಾಗೊ ಈ ಸಮುದಾಯದವರು ಬಂಡವಾಳಶಾಯಿಗಳು ನಿರ್ಮಿಸಿದ ಕೈಗಾರಿಕೆಗಳಲ್ಲಿ ಅವರು ಕೊಟ್ಟಷ್ಟು ಕೂಲಿಗೆ ದುಡಿಯುವುದು ಅನಿವಾರ್ಯವಾಗಿದೆ.

**ಕೋಷ್ಟಕ 2: ಸರ್ಕಾರದಿಂದ ಸಾಲ ಪಡೆದ ಮತ್ತು ಸಾಲ ಪಡೆದಿಲ್ಲದವರ ವಿವರ**

| ವಿವರ | ಸಂಡೂರು | | ಸಿರುಗುಪ್ಪ | | ಹೊಸಪೇಟೆ | | ಹಗರಿ ಬೊಮ್ಮನಹಳ್ಳಿ | | ಒಟ್ಟು | |
|---|---|---|---|---|---|---|---|---|---|---|
| | ಆವೃತ್ತಿ | ಶೇ. | ಆವೃತ್ತಿ | ಶೇ. | ಆವೃತ್ತಿ | ಶೇ. | ಆವೃತ್ತಿ | ಶೇ. | ಆವೃತ್ತಿ | ಶೇ. |
| ಸಾಲ ಪಡೆದಿದ್ದಾರೆ | 0 | 0 | 1 | 5 | 1 | 5 | 1 | 5 | 3 | 3.75 |
| ಸಾಲ ಪಡೆದಿಲ್ಲ | 20 | 100 | 19 | 95 | 19 | 95 | 19 | 95 | 77 | 96.25 |
| ಒಟ್ಟು | 20 | 100 | 20 | 100 | 20 | 100 | 20 | 100 | 80 | 100 |

**ಮೂಲ: ಕ್ಷೇತ್ರಕಾರ್ಯ**

ಭೋವಿ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರವು ಭೋವಿ ಅಭಿವೃದ್ಧಿ ನಿಗಮವನ್ನು ತೆರೆದಿದೆ. ಈ ಸಮುದಾಯದ ಸಬಲೀಕರಣಕ್ಕಾಗಿ ಹಲವಾರು ಸವಲತ್ತುಗಳನ್ನು ಕಲ್ಪಿಸಿದ್ದರೂ ಕೂಡ ಸಮುದಾಯದವರಿಗೆ ನೇರವಾಗಿ ತಲುಪದೆ ಮಧ್ಯವರ್ತಿಗಳ ಪಾಲಾಗುತ್ತಿದೆ. ಮೇಲಿನ ಕೋಷ್ಟಕದಲ್ಲಿ ತೋರಿಸಿರುವಂತೆ ನಾಲ್ಕು ತಾಲೂಕಿನ 80 ಜನರನ್ನು ಆಯ್ಕೆ ಮಾಡಿ ಸಂದರ್ಶನ ಮಾಡಲಾಗಿದ್ದು ವಕ್ತೃಗಳು ನೀಡಿದ ಮಾಹಿತಿಯಂತೆ ಸಂಡೂರು ತಾಲೂಕಿನಲ್ಲಿ ಯಾರಿಗೂ ಕೂಡ ಯಾವುದೇ ಸೌಲಭ್ಯ ದೊರಕದಿರುವುದು ಕಂಡು ಬಂದಿದೆ. ಇನ್ನುಳಿದಂತೆ ಎಲ್ಲಾ ತಾಲೂಕಿನಲ್ಲಿಯೂ ಶೇ.5 ರಷ್ಟು ಜನರಿಗೆ ಒಟ್ಟು 3.75 ರಷ್ಟು ಜನರಿಗೆ ವಿವಿಧ ಸೌಲಭ್ಯ ದೊರೆತಿರುವುದನ್ನು ಕಾಣಬಹುದಾಗಿದೆ.

**ಸಾಮಗ್ರಿಗಳ ವೆಚ್ಚ**

ಕಲ್ಲುಗಳನ್ನು ಮತ್ತು ಬಂಡೆಗಳನ್ನು ತೆಗೆಯಲು ತಿಂಗಳಿಗೆ 5000 ರೂ. ಖರ್ಚು ತಗುಲಿದರೆ, ಗೃಹಬಳಕೆಯ ಸಾಮಾಗ್ರಿಗಳ ತಯ ಾರಿಕೆಗೆ 2000 ರಿಂದ 3000 ರೂ. ತಗಲುತ್ತದೆ. ಹಾಗಾಗಿ ಈ ಸಾಮಾಗ್ರಿಗಳನ್ನು ಕೊಂಡುಕೊಳ್ಳಲು ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ.

**ತಂತ್ರಜ್ಞಾನದ ಕೊರತೆ**

ಭೋವಿ ಸಮುದಾಯವು ತಮ್ಮ ಪಾರಂಪರಿಕ ವೃತ್ತಿಯನ್ನು ಮಾಡಲು ಆಧುನಿಕ ವಸ್ತುಗಳಾದ ಮಿಷನ್‌ಗಳನ್ನು ಬಳಸದೇ ಅದೇ ಸಾಂಪ್ರದಾಯಿಕ ವಸ್ತುಗಳನ್ನು ಬಳಕೆ ಮಾಡುತ್ತಿದ್ದು ಇದು ಕೂಡ ಸಮುದಾಯದ ಬಡತನಕ್ಕೆ ಕಾರಣವಾಗಿದೆ.

**ಸಮಾರೋಪ**

ಒಟ್ಟಾರೆಯಾಗಿ ಭೋವಿ ಸಮುದಾಯವು ಕಲ್ಲು, ಬಂಡೆಗಳನ್ನು ಒಡೆಯುವಂತಹ ಕಠಿಣವಾದ ಕೆಲಸಗಳನ್ನು ಮಾಡುತ್ತ ಪುರಾತನ ಕಾಲದಿಂದ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಹೀಗೆ ತಲೆಮಾರುಗಳಿಂದ ತಲೆಮಾರಿಗೆ ವೃತ್ತಿಯನ್ನು ಬೆಳೆಸುತ್ತಾ ಜೀವನವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಆದರೆ ಇಂದು ಕೈಗಾರೀಕರಣ, ಖಾಸಗೀಕರಣ, ಜಾಗತೀಕರಣಗಳ ಪ್ರಭಾವದಿಂದ ಪಾರಂಪರಿಕ ವೃತ್ತಿ ಮಾಡುವ ಈ ಸಮುದಾಯವು ಪೈಪೋಟಿ ಮಾಡಲಾಗದೆ ತಮ್ಮ ಮೂಲ ವೃತ್ತಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಮಾಡಲು ಆಸಕ್ತಿ ಇಲ್ಲದವರು ಕೂಡ ಜಮೀನುಗಳಿಲ್ಲದ ಕಾರಣ ನಗರ ಪ್ರದೇಶಗಳಿಗೆ ಉದ್ಯೋಗ ಅರಸಿ ವಲಸೆ ಹೋಗುವುದು ಸಾಮಾನ್ಯವಾಗಿದ್ದು, ಇದರಿಂದಾಗಿ ಮಕ್ಕಳ ಶಿಕ್ಷಣದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಹಾಗಾಗಿ ಸರ್ಕಾರವು ಈ ಸಮುದಾಯದವರಿಗೆ ಇರುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಪರಿಣಾಮಕಾರಿಯಾಗಿ ಬಳಕೆಯಾಗುವಂತೆ ಮಾಡಬೇಕಿದೆ.

**ವಕ್ತೃಗಳ ಮಾಹಿತಿ**

1. ಶ್ರೀದೇವಿ. (ವಯಸ್ಸು 30), ಕಂಪ್ಲಿ.
2. ರಾಮಣ್ಣ, (ವಯಸ್ಸು 58), ಸಿರುಗುಪ್ಪ.
3. ಪ್ರಜಾವಾಣಿ ವಾರ್ತೆ, (2022, ಮಾರ್ಚ್ 29). ಪುಟ–6,

**ಪರಾಮರ್ಶನ ಗ್ರಂಥಗಳು**


- ಬಾದಾಮಿ .ಎಂ ಎಸ್. (2010). ಕೈಗಾರಿಕಾ ಅರ್ಥಶಾಸ್ತ್ರ, ವಿದ್ಯಾನಿಧಿ ಪ್ರಕಾಶನ.
- ಹನುಮಂತ, (ಅನು.) (2018). ರಾಜರ್ಷಿ ಶಾಹು ಛತ್ರಪತಿ, ಸಂಪುಟ–1 ಮತ್ತು 2, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಲಸ್ಕರಿ ಆರ್. ಎಸ್. (2011). ಭೋವಿ ಒಡ್ಡ ಜನಾಂಗದ ಸಾಂಸ್ಕೃತಿಕ ಅಧ್ಯಯನ. ರಾಘವೇಂದ್ರ ಪ್ರಕಾಶನ.
- ರಮೇಶ್ ಸ. ಚಿ. (2005). ಅಲೆಮಾರಿಗಳ ಸ್ಥಿತಿಗತಿ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ